ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅನುದಾನಿತ ಪ್ರೌಢಶಾಲೆಯಲ್ಲಿ ರ್‍ಯಾಂಕ್ ಪಡೆದಿರುವುದು

219 - ಶ್ರೀ ಬಸವರಾಜ ಪಾಟೀಲ ಅಟ್ಟೂರ (ಬಸವಕಲ್ಯಾಣ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಏಪ್ರಿಲ್ 1994ರಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಎಷ್ಟು ಅನುದಾನಿತ ಪ್ರೌಢಶಾಲೆಗಳು ರ್‍ಯಾಂಕ್ ಪಡೆದಿದೆ

ಆ) ಶಿಕ್ಷಕರ ದಿನಾಚರಣೆಯಂದು ರ್‍ಯಾಂಕ್ ಪಡೆದಿರುವ ಪ್ರೌಢಶಾಲೆಗಳ ಶಿಕ್ಷಕರನ್ನು ಸನ್ಮಾನಿಸುವ ಬಗ್ಗೆ ಏನಾದರೂ ಪ್ರಸ್ತಾವನೆ ಇದೆಯೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) 24

ಆ) ಇಲ್ಲ

ಬೀದರ್ ಜಿಲ್ಲೆಯಲ್ಲಿ ಕಪ್ಪು ಹಲಗೆ ಯೋಜನೆ

386 - ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಔರಾದ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ವರ್ಷಗಳಲ್ಲಿ ಕಪ್ಪು ಹಲಗೆ ಯೋಜನೆಯು ಎಷ್ಟು ಪ್ರಗತಿಯನ್ನು ಸಾಧಿಸಲಾಗಿದೆ? (ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಇದಕ್ಕಾಗಿ ಈ ಅವಧಿಯಲ್ಲಿ ಪ್ರತಿ ವರ್ಷ ಖರ್ಚು ಮಾಡಿದ ಹಣವೆಷ್ಟು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಕಪ್ಪುಹಲಗೆ ಯೋಜನೆಯಡಿಯಲ್ಲಿ 1 ರಿಂದ 3ನೇ ಹಂತದವರೆಗೆ ಬೀದರ್ ಜಿಲ್ಲೆಯನ್ನು ಆಳವಡಿಸಲಾಗಿದ್ದು ಸದರಿ ಯೋಜನೆಯಲ್ಲಿ ಒಟ್ಟು 388 ಕೊಠಡಿಗಳನ್ನು ನಿರ್ಮಿಸಬೇಕಾಗಿದ್ದು ದಿನಾಂಕ 31-3-94ರವರೆಗೆ 361 ಕೊಠಡಿಗಳನ್ನು ನಿರ್ಮಿಸಲಾಗಿದೆ. ಇನ್ನೂಳಿದ 27 ಕೊಠಡಿಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇರುತ್ತದೆ

ವರ್ಷ	ಹಂತ	ತಾಲ್ಲೂಕು	ಮಂಜೂರಾದ ಕೊಠಡಿಗಳು	ನಿರ್ಮಿಸಲಾದ ಕೊಠಡಿ	ಪ್ರಗತಿಯಲ್ಲಿರುವ ಕೊಠಡಿಗಳು
1987-88	1ನೇ ಹಂತ	(1) ಔರಾದ್	113	113	-
1988-89	2ನೇ ಹಂತ	(1) ಬಸವಕಲ್ಯಾಣ	115	90	25
		(2) ಭಾಲ್ಕಿ	49	49	-
1989-90	3ನೇ ಹಂತ	(1) ಬೀದರ್	70	68	02
		(2) ಹುಮ್ನಾಬಾದ್	41	41	-
		ಒಟ್ಟು	388	361	27

ಸದರಿ ಯೋಜನೆಯಡಿಯಲ್ಲಿ 1 ರಿಂದ 3ನೇ ಹಂತದಲ್ಲಿ ಒಟ್ಟು 167 ಶಿಕ್ಷಕರ ನೇಮಕಾತಿ ಮಾಡಬೇಕಾಗಿದ್ದ 154 ಶಿಕ್ಷಕರನ್ನು ನೇಮಕಾತಿ ಮಾಡಲಾಗಿದೆ. ಹಾಗೂ ಉಳಿದ 13 ಶಿಕ್ಷಕರ ನೇಮಕಾತಿ ಬಗ್ಗೆ ಈಗಾಗಲೇ ಕ್ರಮ ಕೈಗೊಂಡಿದೆ.